## 4ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು

ಸಿ.ಸಿ ನಂ- 11694/2015 **ಚಾ.ಸಾ.-** 13 ಅ.ಸಾ.-2

**ಪ್ರ.ವ.ಬೊ.** ದಿಃ13.03.2020

ಸಾಕ್ಷಿದಾರನ ಹೆಸರು : ಚಿಕ್ಕಸಿದ್ದಯ್ಯ

ತಂದೆಯ ಹೆಸರು : ಲೇಟ್ ಸಿದ್ದಯ್ಯ

ವಯಸ್ಸು : 62 ವರ್ಷ

ಕೆಲಸ : ನಿವೃತ್ತ ಪಿಎಸ್ಐ

ವಾಸ : ಬೆಂಗಳೂರು

ಮುಖ್ಯ ವಿಚಾರಣೆ ಹಿ.ಸಾ.ಸ.ಅ ರವರಿಂದಃ

ದಿಃ 08.09.2013 ರಿಂದ 28.10.2015 ರವರೆಗೆ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯದಲ್ಲಿದ್ದೆ. ದಿಃ 29.10.2014 ರಂದು 11.45 ಗಂಟೆ ಸಮಯದಲ್ಲಿ ಚಾ.ಸಾ.1 ರವರು ಠಾಣೆಗೆ ಹಾಜರಾಗಿ ನೀಡಿದ ದೂರನ್ನು ಪಡೆದು ಪ್ರ.ವ.ವರದಿ ತಯಾರಿಸಿ ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಧಿಕಾರಿಗೆ ರವಾನಿಸಿದ್ದೇನೆ. ದೂರು ನಿ.ಪಿ.1 ಆಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.1(ಎ) ಎಂದು ಗುರುತಿಸಲಾಯಿತು. ಪ್ರ.ವ.ವರದಿ ನಿ.ಪಿ.11 ಹಾಗೂ ಸಾಕ್ಷಿಯ ಸಹಿ ನಿ.ಪಿ.11(ಎ) ಎಂದು ಗುರುತಿಸಲಾಯಿತು. ನಂತರ ದಿಃ 30.10.2014 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಚಾ.ಸಾ.2 ರವರು ತೋರಿಸಿದ ಸ್ಥಳದಲ್ಲಿ ಚಾ.ಸಾ.3 ಮತ್ತು 4 ರವರ ಸಮಕ್ಷಮ ಪಂಚನಾಮೆ ಜರುಗಿಸಿದ್ದೇನೆ. ಪಂಚನಾಮೆ ನಿ.ಪಿ.2 ಆಗಿದ್ದು ಸಾಕ್ಷಿಯ ಸಹಿಯನ್ನು ನಿ.ಪಿ.2(ಬಿ) ಎಂದು ಗುರುತಿಸಲಾಯಿತು. ದಿಃ 02.11.2014 ರಂದು ಆರೋಪಿ ಪತ್ತೆಗಾಗಿ ಚಾ.ಸಾ.10 ಮತ್ತು 12 ರವರನ್ನು ನೇಮಿಸಿದ್ದೆ. ನಾಮಕಲ್‌ಗೆ ಆರೋಪಿ ಮತ್ತು ಮಾಲು ಪತ್ತೆಗೆ ಕಳುಹಿಸಿದ್ದೆ. ದಿಃ 03.11.2014 ರಂದು 12.00 ಗಂಟೆ ಸಮಯದಲ್ಲಿ ಆರೋಪಿಯನ್ನು ಪತ್ತೆ ಮಾಡಿ ಕರೆತಂದು ಹಾಜರುಪಡಿಸಿದ್ದು ವರದಿ ನೀಡಿದ್ದಾರೆ. ವರದಿಯನ್ನು ಸಾಕ್ಷಿ ಗುರುತಿಸಿದ್ದು ನಿ.ಪಿ.12 ಎಂದು ಗುರುತಿಸಲಾಯಿತು. ಆರೋಪಿಯ ಸ್ವಇಚ್ಛಾ ಹೇಳಿಕೆ ಪಡೆದಿದ್ದೇನೆ. ಸ್ವಇಚ್ಛಾ ಹೇಳಿಕೆಯನ್ನು

ನಿ.ಪಿ.13 ಎಂದು ಗುರುತಿಸಲಾಯಿತು. ಸ್ವಇಚ್ಛಾ ಹೇಳಿಕೆಯಲ್ಲಿ ಆರೋಪಿ ಚಾ.ಸಾ.1 ರವರಿಗೆ ಸಂಬಂಧಪಟ್ಟ ಲಾರಿಯನ್ನು ಹಣದ ಸಮಸ್ಯೆ ಇದ್ದ ಕಾರಣ ಲಾರಿ ಕೊಡದೇ ಕಂತು ಕಟ್ಟದೇ ತಲೆ ಮರೆಸಿಕೊಂಡಿದ್ದು, ಲಾರಿ ತೆಗೆದುಕೊಂಡು ಹೋಗಿ ನನ್ನ ಸ್ನೇಹಿತನ ತೋಟದ ಮನೆಯಲ್ಲಿ ಇಟ್ಟಿದ್ದು, ನನ್ನ ಜೊತೆ ಬಂದರೆ ನಾನು ನನ್ನ ಸ್ನೇಹಿತನ ತೋಟದಲ್ಲಿ ಇಟ್ಟಿರುವ ಲಾರಿ, ಲಾರಿಯ ಟೈರು ಮಾರಾಟ ಮಾಡಿದ ದಿನೇಶ್‌ನನ್ನು ತೋರಿಸುತ್ತೇನೆ ಮತ್ತು ದಾಖಲಾತಿ ತೋರಿಸುತ್ತೇನೆ ಎಂದು ತಿಳಿಸಿರುತ್ತಾನೆ. ಸಂಬಂಧಪಟ್ಟ ಭಾಗವನ್ನು ನಿ.ಪಿ.13(ಎ) ಎಂದು ಗುರುತಿಸಲಾಯಿತು. ನಂತರ ಆರೋಪಿಯನ್ನು ದಸ್ತಗಿರಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ಮರುದಿನ ಹೆಚ್ಚಿನ ತನಿಖೆಗೆ ನ್ಯಾಯಾಲಯದ ಅನುಮತಿ ಮೇರೆಗೆ ಪೊಲೀಸ್ ವಶಕ್ಕೆ ಪಡೆದು ದಿಃ 08.11.2014 ರಂದು ನಾನು ಮತ್ತು ಸಿಬ್ಬಂದಿ ಆರೋಪಿಯೊಂದಿಗೆ ನಾಮಕಲ್‌ಗೆ ಹೋಗಿ ಆರೋಪಿ ತಿಳಿಸಿದ ಜಾಗಕ್ಕೆ ಹೋಗಿ ನೋಡಲಾಗಿ ಸದರಿ ಸ್ಥಳದ ಆವರಣದಲ್ಲಿ ಲಾರಿ ಚಾರ್ಸಿ ಮಾತ್ರ ಇರುವ ಲಾರಿಯನ್ನು ತೋರಿಸಿದ್ದು, ಸ್ಥಳ ಪಂಚನಾಮೆ ಮಾಡಿ, ಚಲಾಯಿಸುವ ಸ್ಥಿತಿಯಲ್ಲಿ ಇಲ್ಲದ ಕಾರಣ ಪಂಚಾಮೆ ಜರುಗಿಸಿದ್ದೇನೆ. ಸ್ಥಳ ಪಂಚನಾಮೆಯನ್ನು ನಿ.ಪಿ.14 ಸಾಕ್ಷಿಯ ಸಹಿ ನಿ.ಪಿ.14(ಎ) ಎಂದು ಗುರುತಿಸಲಾಯಿತು. ದಿಃ 24.11.2014 ರಂದು ಚಾ.ಸಾ.11 ಮತ್ತು 12 ರವರನ್ನು ಲಾರಿಗೆ ಬಿಡಿಭಾಗಗಳನ್ನು ಅಳವಡಿಸಿ ಲಾರಿ ತರುವಂತೆ ಸೂಚಿಸಿದ್ದೆ. ದಿಃ 26.11.2014 ರಂದು ಚಾ.ಸಾ.11 ಮತ್ತು 12 ರವರು ಸದರಿ ಲಾರಿ ಬಿಡಿ ಭಾಗ ಅಳವಡಿಸಿ ತಂದು ಹಾಜರುಪಡಿಸಿದರು. ಪಿ.ಎಫ್ ನಂ.111/14 ರಲ್ಲಿ ಅಮಾನತ್ತುಪಡಿಸಿ ಮಾಲುಪಟ್ಟಿಗೆ ಅಳವಡಿಸಿ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೇನೆ. ಪಂಚನಾಮೆಯನ್ನು ನಿ.ಪಿ.15 ಸಾಕ್ಷಿಯ ಸಹಿ ನಿ.ಪಿ.15(ಎ) ಎಂದು ಗುರುತಿಸಲಾಯಿತು. ನಂತರ ಮಾನ್ಯ ನ್ಯಾಯಾಲಯದ ಆದೇಶದ ಪ್ರಕಾರ ಚಾ.ಸಾ.1 ರವರಿಗೆ ಮಧ್ಯಂತರ ವಶಕ್ಕೆ ಲಾರಿಯನ್ನು ನೀಡಿದ್ದೇನೆ. ದಿಃ 12.12.2014 ರಂದು ಸಾಕ್ಷಿದಾರರಾದ ಚಾ.ಸಾ.2, ಮನೋಹರ್ ರವರ ಹೇಳಿಕೆ ಪಡೆದಿದ್ದೇನೆ. ದಿಃ 16.12.2014 ರಂದು ಚಾ.ಸಾ.6, 7 ರಿಂದ 12 ರವರ ಹೇಳಿಕೆ ಪಡೆದಿದ್ದೇನೆ. ದಿಃ 17.12.2014 ರಂದು ಆರೋಪಿ ವಿರುದ್ಧ ದೋಷಾರೋಪಣಾ ಪಟ್ಟಿ ಸಲ್ಲಿಸಿದ್ದೇನೆ.

ಆರೋಪಿ ತಲೆಮರೆಸಿಕೊಂಡಿದ್ದಾನೆ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

4ನೇ ಅ ಮು ಮ ದಂ, ಬೆಂಗಳೂರು

4ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು

**ಪಿಸಿಆರ್ ನಂ- ಚಾ.ಸಾ.-**

**ಪ್ರ.ವ.ಬೊ. ದಿಃ .2019**

ಸಾಕ್ಷಿದಾರನ ಹೆಸರು :

ತಂದೆಯ ಹೆಸರು :

ವಯಸ್ಸು : ವರ್ಷ

ಕೆಲಸ :

ವಾಸ : , ಬೆಂಗಳೂರು

ಫಿರ್ಯಾದಿಯ ಪ್ರಮಾಣಪೂರ್ವಕ ಹೇಳಿಕೆಃ

ಮುಂದುವರಿದ ಪ್ರಮಾಣಪೂರ್ವಕ ಹೇಳಿಕೆಃ ಮುಂದೂಡಲಾಯಿತು

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

(ರೂಪ ಆರ್ ಕುಲಕರ್ಣಿ)
4ನೇ ಅ ಮು ಮ ದಂ, ಬೆಂಗಳೂರು

ಸಾಕ್ಷಿಯನ್ನು ಈ ದಿನಾಂಕಃ ರಂದು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.
ಮುಂದುವರಿದ ಮುಖ್ಯ ವಿಚಾರಣೆ ಹಿ.ಸ.ಸ.ಅ ರವರಿಂದಃ

ಪಾಟೀ ಸವಾಲುಃ ಶ್ರೀ ವಕೀಲರಿಂದ

ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಸಮಯ ಕೇಳಿದ್ದಾರೆ ಪಾಟೀ ಸವಾಲು ಮುಂದೂಡಿದೆ.

(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು. ಸಾಕ್ಷಿಯ ಎದುರಿನಲ್ಲಿ ʼಓದಿ ಹೇಳಿದ ಮೇಲೆ ಸರಿ ಇದೆ ಎಂದು ಒಪ್ಪಿ ಸಹಿ ಮಾಡಲಾಗಿದೆ.)

ಓ ಹೇ ಕೇ ಸ ಇ ಒ

4ನೇ ಅ ಮು ಮ ದಂ, ಬೆಂಗಳೂರು